ಆ) ಬಂದಿದೆ.

ಇ) ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಲ್ಲಿ 9 ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅಭಿವೃದ್ಧಿ ನಿಗಮದಲ್ಲಿ 23 ಕೊಳವೆ ಬಾವಿಗಳು ಬಾಕಿ ಇರುತ್ತವೆ.

ಈ) ವಿದ್ಯುತ್ ಸಂಪರ್ಕ ಕಲ್ಪಿಸದೆ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆ.

**5155 (5303) ಶೀ ವಿಶ್ವನಾಥ್ ಹೆಚ್.ಎಂ. (ಸಕಲೇಶಪುರ):** ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಕಲೇಶಪುರ ಮತ್ತು ಆಲೂರು ತಾಲ್ಲೂಕುಗಳಿಗೆ 2004–05 ಮತ್ತು 2005–06 ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ನೀಡಿರುವ ಕೊಳವೆ ಬಾವಿಗಳೆಷ್ಟು;

ಆ) ಕೊಳವೆ ಬಾವಿ ಕೊರೆಯಲು ಯಾವ ಕಂಪನಿಗೆ ವಹಿಸಲಾಗಿದೆ:

ಇ) ಈ ಸಾಲುಗಳಲ್ಲಿ ಕೊರೆಯಿಸಿರುವ ಬಾವಿಗಳೆಷ್ಟು:

ಈ) ಕೊರೆಯದೆ ಇರುವ ಕೊಳವೆ ಬಾವಿಗಳೆಷ್ಟು:

ಉ) ಕೊರೆಯದೆ ಇರಲು ಕಾರಣವೇನು?

ಊ) ಕೊಳವೆ ಬಾವಿ ಕೊರೆಯಲು ಸಮಸ್ಯೆ ಇದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳೇನು?

**ಡಾ: ವೈ. ನಾಗಪ್ಪ (ಮಾನ್ಯ ಸಮಾಜ ಕಲ್ಯಾಣ ಸಚಿವರು) :**

ಅ) ಸಕಲೇಶಪುರ ಮತ್ತು ಆಲೂರು ಎರಡು ತಾಲ್ಲೂಕುಗಳು ಸಕಲೇಶಪುರ ಮತಕ್ಷೇತ್ರಕ್ಕೆ ಒಳಪಟ್ಟಿದ್ದು, 2004–05 ಮತ್ತು 2005–06ನೇ ಸಾಲಿಗೆ ಸದರಿ ಮತಕ್ಷೇತ್ರಕ್ಕೆ ಈ ಕೆಳಕಂಡಂತೆ ಗುರಿ ನಿಗದಿಪಡಿಸಲಾಗಿದೆ.

| ವರ್ಷ | ನಿಗದಿಪಡಿಸಿದ ಗುರಿ | | |
|---|---|---|---|
| | ಪ.ಜಾತಿ | ಪ.ವರ್ಗ | ಒಟ್ಟು |
| 2004–05 | 16 | 02 | 18 |
| 2005–06 | 48 | 35 | 83 |

ಆ) 2004–05ನೇ ಸಾಲಿನಲ್ಲಿ ಈ ಕೆಳಕಂಡ ಕಂಪನಿಗಳಿಗೆ ಕೆಲಸ ವಹಿಸಲಾಗಿದೆ.

1. ಮೆ: ಬಾಲಾಜಿ ಡ್ರಿಲ್ಲರ್ಸ್, ಬಿಜಾಪುರ
2. ಮೆ: ರವಿ ಬೋರ್‌ವೆಲ್ಸ್, ಕಡೂರು
3. ಮೆ: ಜೇನುಕಲ್ ಬೋರ್‌ವೆಲ್ಸ್, ಅರಸೀಕೆರೆ.

ಇ) ಸದರಿ ಮತಕ್ಷೇತ್ರದಲ್ಲಿ 2004–05 ನೇ ಸಾಲಿನಲ್ಲಿ 10 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. (ಈ 10 ಕೊಳವೆ ಬಾವಿಗಳು 2003–04 ನೇ ಸಾಲಿನಲ್ಲಿ ಬಾಕಿ ಇದ್ದ ಗುರಿಯಲ್ಲಿ ಕೊರೆದ ಕೊಳವೆ ಬಾವಿಗಳಾಗಿರುತ್ತವೆ.)

2005–06ನೇ ಸಾಲಿನಲ್ಲಿ ನಿಗದಿಪಡಿಸಿದ ಗುರಿಯಂತೆ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಮುಗಿದ ನಂತರ ಕೊಳವೆ ಬಾವಿಗಳನ್ನು ಕೊರೆಯಲಾಗುವುದು.

ಈ) ಸಕಲೇಶಪುರ ಮತಕ್ಷೇತ್ರದಲ್ಲಿ 2004–05 ಮತ್ತು 2005–06ನೇ ಸಾಲಿಗೆ ನಿಗದಿಪಡಿಸಿದ ಗುರಿಯಂತೆ 101 ಕೊಳವೆ ಬಾವಿಗಳು ಕೊರೆಯಲು ಬಾಕಿ ಇವೆ.

ಉ) 2003–04ನೇ ಸಾಲಿನಲ್ಲಿ ಕೊಳವೆ ಬಾವಿಗಳನ್ನು ಕೊರೆಯಲು ಟೆಂಡರ್ ಕರೆಯಲಾಗಿದ್ದು, ಮೆ:ರಾಜ ರಾಜೇಶ್ವರಿ ಬೋರ್‌ವೆಲ್ಸ್ ಕಂಪನಿ ಇವರು ಟೆಂಡರ್‌ನಲ್ಲಿ ಪ್ರತಿ ಮೀಟರ್‌ಗೆ ರೂ.228 ದರವನ್ನು ನಮೂದಿಸಿದ್ದು, ಟೆಂಡರ್‌ನಲ್ಲಿ ಈ ಜಿಲ್ಲೆಗೆ ಸಂಬಂಧಿಸಿದಂತೆ ಅತಿ ಕಡಿಮೆ ದರ ನಮೂದಿಸಿದ

ಆಧಾರದ ಮೇಲೆ ಇವರಿಗೆ ಕೊಳವೆ ಬಾವಿ ಕೊರೆಯಲು ಮಂಜೂರಾತಿ ನೀಡಲಾಗಿತ್ತು. ಆದರೆ ಸದರಿ ಡ್ರಿಲ್ಲಿಂಗ್ ಕಂಪನಿಯವರು ನಿಗಧಿತ ಅವಧಿಯಲ್ಲಿ ಕೊಳವೆ ಬಾವಿಗಳನ್ನು ಕೊರೆಯದೆ ಇದ್ದ ಪ್ರಯುಕ್ತ ಇವರನ್ನು ಕಪ್ಪು ಪಟ್ಟಿಗೆ ಸೇರಿಸಿ ಠೇವಣಿ ಹಣವನ್ನು ನಿಗಮಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಯಿತು. ಮೆ: ರವಿ ಬೋರ್ ವೆಲ್ಸ್ ಕಡೂರು, ಮೆ:ಬಾಲಾಜಿ ಡ್ರಿಲ್ಲರ್ಸ್, ಬಿಜಾಪುರ ಮತ್ತು ಮೆ: ಜೇನುಕಲ್ ಬೋರ್ ವೆಲ್ಸ್ ಕಂಪನಿ ಅರಸೀಕೆರೆ ಇವರಿಗೆ ಅದೇ ದರದಲ್ಲಿ 2004–05ನೇ ಸಾಲಿನ ಡಿಸೆಂಬರ್ ಮಾಹೆಯಲ್ಲಿ ಕೊಳವೆ ಬಾವಿ ಕೊರೆಯಲು ಕಾರ್ಯಾದೇಶ ನೀಡಲಾಯಿತು. ಅದರಂತೆ ಹಾಸನ ಜಿಲ್ಲೆಯಲ್ಲಿ ಕೊಳವೆ ಬಾವಿ ಕಾರ್ಯ ನಿರ್ವಹಿಸಿದ್ದು, ಸಕಲೇಶ್ವರ ಮತಕ್ಷೇತ್ರದಲ್ಲಿ 10 ಕೊಳವೆ ಬಾವಿಗಳನ್ನು ಮಾತ್ರ ಕೊರೆದಿರುತ್ತಾರೆ. ಇತ್ತೀಚೆಗೆ ಡೀಸಲ್ ದರ ಹೆಚ್ಚಾಗಿರುವ ಕಾರಣ ಕೆಲಸ ಸ್ಥಗಿತಗೊಳಿಸಿರುತ್ತಾರೆ.

ಊ) ಟೆಂಡರ್ ದರ ಅತಿ ಕಡಿಮೆ ಇರುವುದರಿಂದ ಯಾವುದೇ ಕಂಪನಿಗಳು ಕೊಳವೆ ಬಾವಿಗಳನ್ನು ಕೊರೆಯಲು ಮುಂದೆ ಬಾರದ ಪ್ರಯುಕ್ತ 2005–06ನೇ ಸಾಲಿನಲ್ಲಿ ಹೊಸ ಟೆಂಡರ್‌ನ್ನು ಕರೆಯಲಾಗಿದೆ. ಟೆಂಡರ್ ದರ ಅಂತಿಮಗೊಂಡ ನಂತರ ಬಾಕಿ ಇರುವ ಬ್ಯಾಕ್‌ಲಾಗ್ ಗುರಿಯನ್ನು ಮತ್ತು 2005–06ನೇ ಸಾಲಿನ ಗುರಿಯನ್ನು ಸೇರಿಸಿ ಎಲ್ಲಾ ಕೊಳವೆ ಬಾವಿಗಳನ್ನು ಕೊರೆಸಲು ಕ್ರಮ ಕೈಗೊಳ್ಳಲಾಗುವುದು.

**5156 (5303) ಶೀ ವಿಶ್ವನಾಥ್ ಹೆಚ್.ಎಂ. (ಸಕಲೇಶಪುರ):** ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಕಲೇಶಪುರ ಮತ್ತು ಆಲೂರು ತಾಲ್ಲೂಕುಗಳಿಗೆ 2004–05 ಮತ್ತು 2005–06 ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ನೀಡಿರುವ ಕೊಳವೆ ಬಾವಿಗಳೆಷ್ಟು;

ಆ) ಕೊಳವೆ ಬಾವಿ ಕೊರೆಯಲು ಯಾವ ಕಂಪನಿಗೆ ವಹಿಸಲಾಗಿದೆ:

ಇ) ಈ ಸಾಲುಗಳಲ್ಲಿ ಕೊರೆಯಿಸಿರುವ ಬಾವಿಗಳೆಷ್ಟು:

ಈ) ಕೊರೆಯದೆ ಇರುವ ಕೊಳವೆ ಬಾವಿಗಳೆಷ್ಟು:

ಉ) ಕೊರೆಯದೆ ಇರಲು ಕಾರಣವೇನು?

ಊ) ಕೊಳವೆ ಬಾವಿ ಕೊರೆಯಲು ಸಮಸ್ಯೆ ಇದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳೇನು?

**ಡಾ: ವೈ. ನಾಗಪ್ಪ (ಮಾನ್ಯ ಸಮಾಜ ಕಲ್ಯಾಣ ಸಚಿವರು) :**

ಅ) ಸಕಲೇಶಪುರ ಮತ್ತು ಆಲೂರು ಎರಡು ತಾಲ್ಲೂಕುಗಳು ಸಕಲೇಶಪುರ ಮತಕ್ಷೇತ್ರಕ್ಕೆ ಒಳಪಟ್ಟಿದ್ದು, 2004–05 ಮತ್ತು 2005–06ನೇ ಸಾಲಿಗೆ ಸದರಿ ಮತಕ್ಷೇತ್ರಕ್ಕೆ ಈ ಕೆಳಕಂಡಂತೆ ಗುರಿ ನಿಗದಿಪಡಿಸಲಾಗಿದೆ.

| ವರ್ಷ | ನಿಗದಿಪಡಿಸಿದ ಗುರಿ | | |
|---|---|---|---|
| | ಪ.ಜಾತಿ | ಪ.ವರ್ಗ | ಒಟ್ಟು |
| 2004–05 | 16 | 02 | 18 |
| 2005–06 | 48 | 35 | 83 |

ಆ) 2004–05ನೇ ಸಾಲಿನಲ್ಲಿ ಈ ಕೆಳಕಂಡ ಕಂಪನಿಗಳಿಗೆ ಕೆಲಸ ವಹಿಸಲಾಗಿದೆ.

1. ಮೆ: ಬಾಲಾಜಿ ಡ್ರಿಲ್ಲರ್ಸ್, ಬಿಜಾಪುರ
2. ಮೆ: ರವಿ ಬೋರ್‌ವೆಲ್ಸ್, ಕಡೂರು
3. ಮೆ: ಜೇನುಕಲ್ ಬೋರ್‌ವೆಲ್ಸ್, ಅರಸೀಕೆರೆ.